ಶ್ರೀ ವಿ. ಎಂ. ಘಾಡಿ.—ಅಧ್ಯಕ್ಷರೆ, ಸಾಮಾನ್ಯವಾಗಿ ಸಸ್ಪೆಂಡ್ ಮಾಡಿದ ಮೇಲೆ ೬ ತಿಂಗಳೊಳಗೆ ಎನ್‌ಕ್ವೈರಿ ಮಾಡಬೇಕು, ಇವರು ಒಂದೇ ವಾರದಲ್ಲಿ ಸಸ್ಪೆನ್‌ಷನ್ ರದ್ದು ಮಾಡಿದ್ದಾರೆ ಇದಕ್ಕೆ ಕಾರಣ ಏನು ?

ಅಧ್ಯಕ್ಷರು —೧೯೭೯ರಲ್ಲಿ ಏತಕ್ಕೆ ಆ ರೀತಿ ಆಯಿತು ಎನ್ನುವುದನ್ನು ೧೯೮೨ರಲ್ಲಿ ನೀವು ಕೇಳಿದರೆ ಅವರು ಏನು ಹೇಳುತ್ತಾರೆ.

ಶ್ರೀ ವಿ. ಎಂ. ಘಾಡಿ.—ಅಧ್ಯಕ್ಷರೆ, ಒಂದು ವಾರದಲ್ಲಿ ಸಸ್ಪೆನ್‌ಷನ್ ಏತಕ್ ಮಾಡಿದ್ದಾರೆ ಆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು.

ಶ್ರೀ ಜಿ. ಮಾದೇಗೌಡ.—ಅಧ್ಯಕ್ಷರೆ, ಒಂದು ವಾರ ಅಲ್ಲ, ಒಂದು ತಿಂಗಳು ಆದಮೇಲೆ ಸಸ್ಪೆನ್‌ಷನ್ ರಿವೋಕ್ ಮಾಡಿದ್ದಾರೆ.

ಶ್ರೀ ವಿ. ಎಂ. ಘಾಡಿ.—ಇದಕ್ಕೆ ಮೂಲ ಕಾರಣ ಡಿ. ಎಫ್. ಓ. ೩ ಲಕ್ಷ ರೂಪಾಯಿಗೂ ಹೆಚ್ಚು ಬೆಲೆ ಬಾಳತಕ್ಕ ಅರಣ್ಯ ಸಾಮಗ್ರಿಗಳು ಅಕ್ರಮವಾಗಬೇಕಾದರೆ ಡಿ. ಎಫ್. ಓ. ಅವರೇ ಕಾರಣ ರಾಗುತ್ತಾರೆ. ಚೆಕ್‌ಪೋಸ್ಟ್‌ನಲ್ಲಿರತಕ್ಕವರು ಕೆಲವುಸಾರಿ ಮಲಗಿಕೊಳ್ಳತಕ್ಕದ್ದು ಇರುತ್ತದೆ. ಅಲ್ಲಿ ಅರಣ್ಯ ಲೂಟಿ ಮಾಡತಕ್ಕದ್ದು ನಡೆದಿದೆ. ಆದುದರಿಂದ ಈ ಅಧಿಕಾರಿಗಳ ಮೇಲೆ ಜುಡಿಷಿಯಲ್ ಎನ್‌ಕ್ವೈರಿ ಮಾಡಬೇಕೆಂದು ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಮಾದೇಗೌಡ.—ನಾವು ಈಗಾಗಲೇ ಎನ್‌ಕ್ವೈರಿ ಮಾಡುತ್ತಿದ್ದೇವೆ. ಇನ್ನು ಒಂದು ತಿಂಗಳಲ್ಲಿ ಅದು ಮುಕ್ತಾಯವಾಗುತ್ತದೆ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ. ಇವೊತ್ತು ತಾವು ಡಿ. ಎಫ್. ಓ. ವಿಚಾರ ಹೇಳುವುದಾದರೆ ಅವರಿಗೆ ೬ ಲಕ್ಷ ಎಕರೆಯಷ್ಟು ವಿಸ್ತೀರ್ಣ ಇರುತ್ತದೆ. ಅದಕ್ಕೂ ಇದಕ್ಕೂ ಸಂಬಂಧವಿಲ್ಲ. ಸಂಬಂಧಪಟ್ಟಂಥ ಫಾರೆಸ್ಟ್‌ಗಾರ್ಡ್ಸ್, ಫಾರೆಸ್ಟರ್ಸ್ ಆ ಸ್ಥಳದಲ್ಲಿದಂಥ ಅಧಿಕಾರಿಗಳು ಹಿಡಿಯಬೇಕಾಗಿತ್ತು. ಬಹುಶಃ ಇವರು ಸೇರಿಕೊಂಡಿದ್ದಾರೆ ಎನ್ನುವ ಸಂಶಯ ಇದೆ. ಎನ್‌ಕ್ವೈರಿಗೆ ಹಾಕಿದ್ದೇವೆ. ೧೧ ಜನರು ಇದರಲ್ಲಿ ಇನ್‌ವಾಲ್ವ್ ಆಗಿರುವುದಿಲ್ಲ. ಯಾರೋ ಒಬ್ಬರು ಸಂಬಂಧಪಟ್ಟ ಅಧಿಕಾರಿಗಳು ಇರಬಹುದು. ಅದಕ್ಕೋಸ್ಕರ ತನಿಖೆ ನಡೆಸಿ ಯಾರು ತಪ್ಪಿತಸ್ಥರು ಎಂದು ಕಂಡು ಬರುತ್ತಾರೆ ಅವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆಂದು ನಾನು ಆಗಲೇ ಹೇಳಿದ್ದೇನೆ.

Repairs to Municipal High School Building at Birur

132 SRI MARGADA MALLAPPA (Birur).—Will the Minister for Public Works be pleased to state :

(a) whether it has come to the notice of Government that the Municipal High School building in Birur taken over by Government has not been repaired for the last ten years and repeated representations in this regard have been in vain ;

(b) whether Government will take immediate action to get it repaired to prevent collapse of the building as it is in dilapidated condition ?

SRI KAGODU THIMMAPPA (Minister for Public Works).—

(a) The Municipal High School building is taken over by Public Works Department for maintenance on 24-9-1981 and since repaired.

(b) Necessary repairs are already carried out during the Silver Jubilee year of Karnataka

ಶ್ರೀ ಎಂ. ಮಲ್ಲಪ್ಪ.—ಈ ಪ್ರೌಢ ಶಾಲೆ ಆಡಳಿತವನ್ನು ಸರ್ಕಾರ ಯಾವಾಗ ವಹಿಸಿಕೊಂಡಿದೆ, ಆ ಬಗೆ ಮಾನ್ಯ ಮಂತ್ರಿಗಳಲ್ಲಿ ಏನಾದರೂ ಮಾಹಿತಿ ಇದೆಯೇ ?

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಹೈಸ್ಕೂಲುಗಳನ್ನು ಸರ್ಕಾರ ವಹಿಸಿಕೊಂಡಾಗ ಬಿಲ್ಡಿಂಗ್ ಲೋಕೋಪಯೋಗಿ ಇಲಾಖೆಗೆ ಕೊಟ್ಟಿರಲಿಲ್ಲ. ವಶಕ್ಕೆ ಕೊಟ್ಟಿರತಕ್ಕದ್ದು ೧೯೮೧ರಲ್ಲಿ. ನಾನು ಮಂತ್ರಿಯಾಗಿ ಬಂದಮೇಲೆ ಈ ಕಟ್ಟಡವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಂ. ಮಲ್ಲಪ್ಪ.—ಈ ಪ್ರೌಢ ಶಾಲೆ ಆಡಳಿತವನ್ನು ಸರ್ಕಾರ ತೆಗೆದುಕೊಂಡು ೧೦ ವರ್ಷಗಳಾಗಿದೆ ಈ ಕಾಲ ವಿಳಂಬಕ್ಕೆ ಕಾರಣ ಏನು ?

ಶ್ರೀ ಕಾಗೋಡು ತಿಮ್ಮಪ್ಪ.—ಹಿಂದೆ ಸ್ಥಳೀಯ ಸಂಸ್ಥೆಗಳಿಂದ ಕೆಲವು ಪ್ರೌಢ ಶಾಲೆಗಳನ್ನು ಸರ್ಕಾರ ವಹಿಸಿಕೊಂಡಿದೆ. ಅದು ಆದಮೇಲೆ ವಿದ್ಯಾ ಇಲಾಖೆಯವರಿಗೂ, ನಮ್ಮ ಇಲಾಖೆಯವರಿಗೂ ಮಧ್ಯದಲ್ಲಿ ಅವರಿಗೆ ಹೊಂದಾಣಿಕೆಯಾಗದೆ ಹಾಗೆ ಇದ್ದುವು. ನಾನು ಬಂದಮೇಲೆ ಎಲ್ಲರನ್ನು ಕರೆಸಿ ಕೊಂಡು ಮಾತನಾಡಿದಾಗ ನಮ್ಮವರು ಈ ಕ್ವಲ್ ಗ್ರಾಂಟ್ಸ್ ಕೊಟ್ಟರೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದರು. ಗ್ರಾಂಟ್ಸ್ ಬಗ್ಗೆ ಮುಂದೆ ನೋಡಿಕೊಳ್ಳೋಣ ಎಂದು ಹೇಳಿ ಎಲ್ಲರನ್ನೂ ಕರೆಸಿ ಮಾತನಾಡಿ ಬಿಲ್ಡಿಂಗ್ ವಹಿಸಿಕೊಂಡು ರಿಪೇರಿ ಮಾಡುತ್ತಿದ್ದೇವೆ.

ಶ್ರೀ ಎಂ. ಮಲ್ಲಪ್ಪ.—ಸ್ಥಳೀಯ ಸಂಸ್ಥೆಗಳಿಂದ ವಹಿಸಿಕೊಂಡಂಥ ಕಟ್ಟಡಗಳಿಗೆ ಕೂಡಲೇ ಕ್ರಮ ತೆಗೆದುಕೊಂಡು ಈ ದುರಸ್ತಿ ಕಾರ್ಯ ಮಾಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಆ ದೃಷ್ಟಿಯಿಂದಲೇ ಮಾಡಿರುವುದು.

Allotment of Medical Seats on reciprocal basis

65 SRI P. ANANDKUNDA HEGDE (Brahmavara).—Will the Minister for Health and Family Welfare be pleased to state:—

(a) the names of candidates who have been provided medical seats on reciprocal basis between our State Andhra and Temilnadu for the last two years ;

(b) the reasons for not selecting the College and Hostel at the time of selection of medical seats without inconveniencing the respective students ?

SRI A. K. ABDUL SAMAD (Minister for Health and Family Welfare).—

(a) The names of students who have secured seats on reciprocal basis from Karnataka State to Tamil Nadu and Andhra Pradesh are as follows.

From Karnataka State to Tamil Nadu :

1979-80	...	1	Smt. Asha B. S.
		2	Smt. Smita C. Raikar
1980-81		1	Shri Shivarama Singh
		2	Shri R. Upendra Sheonay